ಸುಂದರಿ ಅವನಿಗೆ ಮಾರುಹೋದಳು ಅಂತ ನಾನಾಗಲೀ, ರಮಾಕಾಂತನಾಗಲೀ ಗುಟ್ಟಾಗಿಯೇ ಹೊಟ್ಟೆ ಉರಿದುಕೊಂಡಿದ್ದೆವು. ಮಾರಾಟವಾದ ವಸ್ತುವಂತೆ, ಎಟುಕದ ಹಣ್ಣಂತೆ ನಾವು ಅವಳ ಆಸೆ ಬಿಟ್ಟಿದ್ದೆವು.

ಆದರೆ ಹತ್ತಿದ ಬೆಟ್ಟದ ಮುಂದೆ ಯಾವ ಸುಳ್ಳೂ ನಡೆಯುವುದಿಲ್ಲ ಅಂತ ಅರ್ಥವಾಗುವಂತೆ ಆ ಪ್ರಕರಣ ನಡೆಯಿತು. ಸುಸ್ತಾಗಿ ಬಿದ್ದುಕೊಂಡ ವಿಶ್ವನಿಗೆ ಎದ್ದು ಹೋಗಿ ನೀರು ಹುಡುಕುವ ತ್ರಾಣವೂ ಇರಲಿಲ್ಲ. ಸುರಭಿ ಅವನನ್ನು ಎಷ್ಟೇ ಓಲೈಸಲು ಹೋದರೂ ಅವನು ಸಾಧ್ಯವೇ ಇಲ್ಲ ಅಂತ ಮಲಗಿಬಿಟ್ಟ. ಸುರಭಿ ಮುಖ ಇನ್ನೂ ಕೆಂಪಾಗಿತ್ತು. ಏರಿಬಂದ ಆಯಾಸ ಅಲ್ಲದೇ ಹೋದರೂ ಅದೇನೋ ಮನಸ್ಸು ಮುರಿದುಕೊಂಡ ಕೋಪ ಅವಳ ಮನದಲ್ಲಿ ಭುಗಿಲೆದ್ದಿರಬೇಕು. ನಾನು ಹೊರಟೆ ಅಂತ ಅವಳೇ ನೀರಿನ ಬಾಟಲಿ ಹಿಡಿದು ಏಕಾಏಕಿ ಹೊರಟು ಬಿಟ್ಟಳು. ಅತ್ಯಾಶ್ಚರ್ಯವೆನ್ನುವಂತೆ ವಿಶ್ವ ಅದನ್ನು ವಿರೋಧಿಸಲಿಲ್ಲ, ನಾನೂ ಬಂದೆ ಎನ್ನಲಿಲ್ಲ. ಹಾಗೆ ಅವಳೊಬ್ಬಳೇ ಅಪರಿಚಿತ ಜಾಗದ ಕಡೆ ಹೊರಟದ್ದನ್ನು ನೋಡಿ, ನಾನು ರಮಾಕಾಂತನಿಗೆ ಕಣ್ಸನ್ನೆ ಮಾಡಿದೆ. ಅವನು ಎದ್ದ, ನಾವಿಬ್ಬರೂ ಸುರಭಿಗೆ ಹಿಂಬಾಲಕರಾದೆವು.

ಬೆಟ್ಟ ಹತ್ತುವ ಹತ್ತುಪಟ್ಟು ಶಕ್ತಿ ಆ ಸುರಭಿಯನ್ನು ಹಿಂಬಾಲಿಸುವಾಗ ವ್ಯಯವಾಯಿತೆಂದೇ ಹೇಳಬೇಕು. ರಮಾಕಾಂತ ನನಗಾಗದು ಅಂದ. ನಾನು ಸುರಭಿ ಮೇಲಿನ ಕಾಳಜಿಗಿಂತಲೂ ಹೆಣ್ಣೊಬ್ಬಳು ಹಾಗೆ ಜಾಗವಲ್ಲದ ಜಾಗದಲ್ಲಿ ನಡೆದು ಹೋಗುತ್ತಿದ್ದಾಳೆಂಬ ಭಯ, ಗಂಡಸಾಗಿ ನನ್ನ ಜವಾಬ್ದಾರಿ ಎನ್ನುವ ದೃಷ್ಟಿಯಿಂದಲೋ ಅಥವಾ ಗುಟ್ಟಾಗಿ ನನಗೆ ಸುರಭಿ ಮೇಲೆ ಇದ್ದ ಕಳ್ಳಪ್ರೀತಿಯಿಂದಲೋ – ಹಿಂಬಾಲಿಸಿ ಹೊರಟೆ.

